## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಸಕಲೇಶಪುರ

## C.C.No. 677/2018

| | | |
|---|---|---|
| ಹೆಸರುಃ | ಅಬ್ದುಲ್ ಗಫಾರ್ | CW-1 |
| ತಂದೆ/ಗಂಡ ಹೆಸರುಃ | ಅಬೂಬಕರ್ | PW-2 |
| ವಯಸ್ಸು | 48 ವರ್ಷ | |
| ವೃತ್ತಿ | ವ್ಯಾಪಾರ | |
| ವಿಳಾಸಃ | ಈಶ್ವರಳ್ಳಿ ಕೂಡಿಗೆ | **ದಿನಾಂಕಃ17-07-2023** |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಶ್ರೀ ಎ ಪಿ ಪಿ ಯವರಿಂದ

ಚಾಸಾ-2 ರಿಂದ 6 ಗೊತ್ತು. ಆರೋಪಿ ಗೊತ್ತು. ಆರೋಪಿಯು ಸಿ ಆರ್ ಎಸ್ ಫೈನಾನ್ಸ್ ಮತ್ತು ಪಾನ್ ಬ್ರೋಕರ್ ಅಂಗಡಿಯನ್ನು ನಡೆಸುತ್ತಿದ್ದರು. ಸದರಿ ಅಂಗಡಿಯು ಬಾಳ್ಳುಪೇಟೆಯ ಕೆ ಹೆಚ್ ರಸ್ತೆಯಲ್ಲಿ ಇರುವ ಬನಸಿರಿ ಕಾಂಪ್ಲೆಕ್ಸ್ ನಲ್ಲಿ ಇತ್ತು. ಆರೋಪಿಯು ನನಗೆ ಪರಿಚಯ ಇದ್ದುದರಿಂದ ನಾನು ಸದರಿ ಫೈನಾನ್ಸ್ ನಲ್ಲಿ ಹಣ ಪಡೆಯುವ ಸಲುವಾಗಿ ವಡವೆಯನ್ನು ಗಿರವಿ ಇಡುತ್ತಿದ್ದೆ. ನಾನು ಸದರಿ ಗಿರವಿ ಅಂಗಡಿಯಲ್ಲಿ ಮೊದಲೂ ಸಹ ಚಿನ್ನ ಇಟ್ಟು ಹಣ ಪಡೆಯುತ್ತಿದ್ದೆ.

ದಿಃ 12-05-2017 ರಂದು ನಾನು ನನ್ನ ಬಾಬ್ತು ಒಟ್ಟು 96 ಗ್ರಾಂ 16 ಮಿಲಿಯಷ್ಟು ಚಿನ್ನದ ವಡವೆಗಳಾದ 04 ಬಳೆ, ಒಂದು ನೆಕ್ಲೆಸ್, ಎರಡು ಮಾಟಿ ಗಳನ್ನು ಗಿರವಿ ಇಟ್ಟು 75 ಸಾವಿರ ರೂಗಳನ್ನು ಆರೋಪಿಯಿಂದ ಪಡೆದಿರುತ್ತೇನೆ. ಆ ಸಮಯದಲ್ಲಿ ನಾನು ಚಿನ್ನ ಇಟ್ಟಿದ್ದ ವಿಚಾರವಾಗಿ ನನಗೆ ಒಂದು ರಸೀದಿಯನ್ನು ನೀಡಿದ್ದರು. ನಾನು ಅವರಿಗೆ ಪ್ರತಿ ತಿಂಗಳು ಬಡ್ಡಿಯನ್ನು ಸಹ ಕಟ್ಟುತ್ತಿದ್ದೆ. ನಾನು ಗಿರವಿ ಇಟ್ಟ ಚಿನ್ನವನ್ನು ಬಿಡಿಸಿಕೊಳ್ಳುವ ಸಲುವಾಗಿ ಫೈನಾನ್ಸ್ ಅಂಗಡಿಗೆ ಹೋದಾಗ ಆರೋಪಿಯು ಸದರಿ ಚಿನ್ನ ಅಲ್ಲಿದೆ ಇಲ್ಲಿದೆ ಎಂದು ಸಬೂಬು ಹೇಳಿಕೊಂಡು ನನಗೆ ಚಿನ್ನವನ್ನು ವಾಪಸ್ಸು ಕೊಟ್ಟಿರುವುದಿಲ್ಲ. ನಂತರ ಆರೋಪಿಯು ಫೈನಾನ್ಸ್ ಅನ್ನು ಕ್ಲೋಸ್ ಮಾಡಿ ಊರು ಬಿಟ್ಟು ಹೋಗಿರುತ್ತಾರೆ ಎಂಬ ವಿಚಾರ ತಿಳಿಯಿತು. ಆರೋಪಿಯು ಸದರಿ ಚಿನ್ನವನ್ನು ಮುತ್ತೂಟ್ ಫೈನಾನ್ಸ್ ಮತ್ತು ಮುತ್ತೂಟ್ ಫಿನ್ ಕಾರ್ಪ್ ನಲ್ಲಿ

ಗಿರವಿ ಇಟ್ಟು ಸದರಿ ಗಿರವಿ ಇಡಲು ನಮ್ಮ ಅನುಮತಿ ಪಡೆಯದೇ ನಮಗೆ ಮೋಸ ಮಾಡಿರುತ್ತಾರೆ. ಆರೋಪಿಯು ನನಗೆ ಮೋಸ ಮಾಡಿರುವ ರೀತಿ ಚಾಸಾ-2 ರಿಂದ 13 ರವರಿಗೆ ಮೋಸ ಮಾಡಿರುತ್ತಾರೆ. ನಾನು ಪೋಲೀಸರಿಗೆ ದೂರು ನೀಡಿರುತ್ತೇನೆ.

ಪೋಲೀಸರು ನಂತರ ಸ್ಥಳಕ್ಕೆ ಬಂದು ನಾನು ತೋರಿಸಿದಂತೆ ಕೃತ್ಯ ಸ್ಥಳ ಮಹಜರ್ ಮಾಡಿರುತ್ತಾರೆ. ಪೋಲೀಸರು ಮಹಜರ್ ಕಾಲಕ್ಕೆ ಸದರಿ ಫೈನಾನ್ಸ್ ಅನ್ನು ತೆರೆದು ನೋಡಲಾಗಿ ಯಾವುದೇ ಚಿನ್ನದ ವಡವೆಗಳು ಇರಲಿಲ್ಲ, ಅಲ್ಲಿದ್ದ ಕೆಲವು ದಾಖಲಾತಿಗಳನ್ನು ಪೋಲೀಸರು ವಶಕ್ಕೆ ಪಡೆದಿರುತ್ತಾರೆ. ಅದೇ ದಿನ ಬೆಳಗ್ಗೆ 9 ರಿಂದ 10 ಗಂಟೆವರೆಗೆ ಪೋಲೀಸರು ಸ್ಥಳ ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ.

ಸಾಕ್ಷಿ ಗುರುತಿಸಿದ ದೂರನ್ನು ನಿಪಿ-5, ಸಾಕ್ಷಿ ಸಹಿ ನಿಪಿ-5 ಎ, ಮಹಜರನ್ನು ನಿಪಿ-6, ಸಾಕ್ಷಿ ಸಹಿ ನಿಪಿ-6 ಎ, ಸಾಕ್ಷಿದಾರರು ಹಾಜರುಪಡಿಸಿದ ಗಿರವಿ ರಸೀದಿ ನಿಪಿ-7 ಎಂದು ಗುರುತಿಸಲಾಯಿತು. ಸಾಕ್ಷಿದಾರರು ತಮ್ಮ ವಡವೆ ಪೋಟೋವನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದಲ್ಲಿ ಗುರುತಿಸುತ್ತೇನೆ. ನಾನು ಸದರಿ ವಡವೆಗಳನ್ನು ಬಿಡುಗಡೆ ಮಾಡಿಸಿಕೊಂಡಿರುತ್ತೇನೆ.

ಪಾಟೀ ಸವಾಲುಃ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**ಜೆ ಎಂ ಎಫ್ ಸಿ,** ಸಕಲೇಶಪುರ